101(2)

SATYAVADI Founded 1917 Regd. No. M 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿತು)

ಸಂಪುಟ 29 ಸಂಚಿಕೆ 168] ಗುರವಾರ 14—3—46. [ಬಿಡಿ ಪ್ರತಿ 3 ಪೈ

ರಷ್ಯಾದಲ್ಲಿ ಇನ್ನು ರೇಷನ್ ಇಲ್ಲ

ಬೆಳೆಗಳು ಚೆನ್ನಾಗಿ ಬೆಳೆದಿರುವುದರಿಂದಲೂ, ರೇಷನಿಂಗ್ ಬಹಳ ಜಾಗರೂಕತೆಯೊಡನೆ ನಡೆಸಿದ್ದರಿಂದಲೂ ರಷ್ಯಾದಲ್ಲಿ ಪ್ರಜೆಗಳಿಗೆ ಸಾಕಾದಷ್ಟು ಆಹಾರವು ದಾಸ್ತಾನು ಮಾಡಲ್ಪಟ್ಟಿದೆ. ಆದುದರಿಂದ ಜಾಗ್ರತೆಯಲ್ಲಿ ರೇಷನಿಂಗು ತೆಗೆದುಹಾಕಲ್ಪಡುವುದೆಂದು ಸ್ಟಾಲಿನ್ನರು ಪ್ರಕಟಿಸಿರುವರಂತೆ! ಯುದ್ಧವು ಮುಗಿದುಹೋಗಿದ್ದರೂ ಭಾರತದೇಶದಲ್ಲಿ ಇನ್ನೂ ರೇಷನಿಂಗು ಪದ್ಧತಿಯು ಜಾರಿಯಲ್ಲಿರುವದೆಂದರೆ ಬ್ರಿಟಿಷ್ ಸರಕಾರದ ವಿಧಾನವನ್ನು ಎಷ್ಟು ಮೆಚ್ಚಿಕ್ಕೊಳ್ಳಬಹುದು! (ದಿ)

ಗಾಂಧೀಜಿಯವರ ಆಕ್ರಂದನ

ಈಚಿಗೆ ಬೊಂಬಾಯಿನಲ್ಲಿ ನಡೆದ ನೌಕಾದಳದ ಸಿಬ್ಬಂದಿಯ ಚರ್ಯೆಯ ವಿಷಯದಲ್ಲಿ ಗಾಂಧೀಜಿಯವರು ಚಿಂತಿಸುತ್ತಾ 'ನನ್ನ ಅಹಿಂಸಾತತ್ವವನ್ನು ಬೊಂಬಾಯಿಯು ಸ್ವಲ್ಪವಾಟ್ಟಿಗೆ ಜೀರ್ಣಿಸಿಕೊಂಡಿರುವುದೆಂದು ಅಂದುಕೊಂಡಿದ್ದೆನು. ನನ್ನ ಅಹಿಂಸಾತತ್ವಕ್ಕೆ ಬೊಂಬಾಯಿ ಸ್ಮಶಾನವಾಟಿಕೆಯಾಗಿ ಬದಲಾಯಿಸುವುದೇ ಎಂದು ಆಕ್ರಂದಿಸುತ್ತಿರುವರು!

ಭಾರಿ ಈರುಳ್ಳಿ

ಕೆನಡಾದಲ್ಲಿ ಒಬ್ಬ ಭಾರತೀಯ ರೈತನು ಎರಡು ಪೌಂಡು ತೂಕವುಳ್ಳ ಈರುಳ್ಳಿಯನ್ನು ಬೆಳೆಸಿರುತ್ತಾನೆ. ಅದರ ಅಡ್ಡಳತೆ ಆರು ಅಂಗುಲ, ಎತ್ತರ ಮೂರು ಅಂಗುಲ.

.....

ಇದು ನಿಮಗೆ ಗೊತ್ತೇ

ವಿಕ್ಟೋರಿಯಾ ಮಹಾರಾಣಿಯವರು ರಾಜ್ಯಭಾರವನ್ನು ವಹಿಸಬೇಕಾಗಿರುವುದೆಂಬ ಮಾತನ್ನು ಕೇಳಿ ಕಣ್ಣೀರು ಸುರಿಸಿದರಂತೆ ವ್ಯವಹಾರದಲ್ಲಿ ಪಕ್ಷಪಾತ, ತಿಳಿಯದೆ ಹೇಳಿಕೆ, ಇವು ಬ್ರಹ್ಮಹತ್ಯ ಪಾಪಕ್ಕೆ ಸನಾತನವಾದವುಗಳು. ಪುಣ್ಯಪಾಪಗಳಿಲ್ಲವೆಂದು ಬಾಯಿಯಲ್ಲಿ ಹೇಳಬಹುದಾಗಲೀ ಅನುಭವಿಸದೇ ತಪ್ಪಿಸಿಕೊಳ್ಳಲಾಗುವುದಿಲ್ಲ.

.....

ಚಿನ್ನ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 63-0-0
ಚಿನ್ನ ತೊಲ 1 ಕ್ಕೆ	92-12-0
ಬೆಳ್ಳಿ	1-9-0

ಕಾನಪುರದಲ್ಲಿ ಗುಂಡುಹಾರಿಸಲಾಯಿತು

ಕಾನಪುರ ಮಾ 12— ಸಂಯುಕ್ತಪ್ರಾಂತ್ಯದ ಅಸೆಂಬ್ಲಿಯ ಚುನಾವಣೆ ಬಗ್ಗೆ ಪಾರ್ಟಿ ಗಲಭೆ ಹೊಡೆದಾಟವಾಗಿ ಪೋಲೀಸರ ಮಿಲಿಟರಿಯವರ ಆಗಮನವೂ ಗುಂಡುಹಾರಿಸುವಿಕೆಯೂ ನಡೆಯಿತೆಂದು ಹೇಳಲಾಗಿದೆ. 4 ಮಂದಿ ಸತ್ತರೆಂದೂ, 100 ಮಂದಿ ಗಾಯಗೊಂಡರೆಂದೂ ಹೇಳಲಾಗಿದೆ. ಪುಂಡರು ಮಸೀದಿ ಗುರುದ್ವಾರಗಳಿಗೆ ಬೆಂಕಿ ಹತ್ತಿಸಿದರೆಂದು ವರದಿಯಾಗಿದೆ.

ಬೊಂಬಾಯಿ ಮಾ 12— ಗಾಂಧೀಜಿಯವರಿಗೆ ಬಂದಿದ್ದ ಬೆಳ್ಳಿ ಚರಕಾ ಲೋಟವನ್ನು ಹರಾಜು ಹಾಕಲಾಗಿತಲಾ 250 ರೂ. ದೊರಕಿಸಿಕೊಟ್ಟವು.

ಲಂಡನ್ ಮಾ 13 — ಬ್ರಿಟನ್ನು ಇಟಲಿಗೆ ಸಾಲಾ ಕೊಡುವುದಿಲ್ಲವೆಂದೂ ನಗದು ವ್ಯಾಪಾರ ನಡೆಸಬೇಕೆಂದೂ ಹೇಳಲಾಗಿದೆ.

1946-47 ರಲ್ಲಿ ಆಟಂ ಪರಿಶೋಧನೆಗಾಗಿ ಬ್ರಿಟನ್ ಸರಕಾರವು ಇಂಗ್ಲೆಂಡಿನಲ್ಲಿ ಮೂರು ಲಕ್ಷ ಪೌಂಡುಗಳನ್ನು ಖರ್ಚುಮಾಡಲಿರುವರು.

ಈಜಿಪ್ಟಿನಲ್ಲಿಯ ಗಲಾಟೆಗಳನ್ನು ಅಣಗಿಸಲು ಬ್ರಿಟನ್ನು ಸರ್ವ ಶಕ್ತಿಯನ್ನೂ ಉಪಯೋಗಿಸುವುದಂತೆ.

ಕಾಂಗ್ರೆಸ್ಸು 1937 ರಲ್ಲಿ ಇದ್ದ ಸ್ಥಿತಿಗಿಂತ ಇಂದು ಒಲಹೀನವಾಗಿದೆಯೆಂದು ಸರ್ ರಾಮಲಿಂಗ ರೆಡ್ಡಿಯವರು ನುಡಿದಿರುವರು.

ಬೊಂಬಾಯಿ ಮಾ 12— ಸಧ್ಯದಲ್ಲೇ ಕಾಂಗ್ರೆಸ್ ಅಧಿವೇಶನ ನಡೆಯುವಂತಿಲ್ಲವೆಂದು ಪಾ || ಅಜಾದರು ಹೇಳಿರುವರು.

ಲಂಡನ್ ಮಾ 12— ಮಂತ್ರಿಮಂಡಲದ ನಿಯೋಗವು ಮುಂದಿನ ಮಂಗಳವಾರ ಭಾರತಕ್ಕೆ ಹಾರಿಬರುವುದೆಂದು ಹೇಳಲಾಗಿದೆ.

ದೆಲ್ಲಿ, ಮಾ 12 — ಈಚಿಗೆ ನಡೆದ ಗಲಭೆಗಳಿಂದ ಇಲ್ಲಿಯ ಮುನಿಸಿಪಾಲಿಟಿಗೆ ಆರು ಲಕ್ಷ ರೂ. ನಷ್ಟವಾಗಿದೆ.

ಲಂಡನ್, ಮಾ 12 — ಚರ್ಚಿಲ್ಲರ ಭಾಷಣವು ಬ್ರಿಟನ್ನಿಗೂ ಅಮೇರಿಕ ರಷ್ಯಾ ಸ್ನೇಹ ಭಾವಕ್ಕೂ ಪ್ರಪಂಚ ಶಾಂತಿಗೂ ಭಂಗತರುವಂತಿದೆಯೆಂಬ ತರಾನ್ನು 26 ಲೇಬರ ಮೆಂಬರುಗಳು ಕಾಮನ್ಸ್ ಸಭೆಗೆ ಕಳುಹಿಸಿರುವರು.

ಸರ್ ಸಿ. ಪಿ. ಯವರ ವಿರುದ್ಧ ಪ್ರದರ್ಶನ

ಎರ್ನಾಕುಲಂ— ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ಯವರ ವಿರುದ್ಧ ಪ್ರದರ್ಶನವನ್ನು ಕೊಚ್ಚಿ ವಿದ್ಯಾರ್ಥಿಗಳು ನಡೆಸಿದುದಕ್ಕಾಗಿ ಅವರಿಗೂ ಪೋಲೀಸರಿಗೂ ಘರ್ಷಣೆಯಾಗಿ 20 ಮಂದಿಗೆ ಜಖಂ ಆಗಿದೆ.

o o

ಸಮ್ಮೇಳನ

ಮೈಸೂರು ಮಾ 14— ಮೈಸೂರು ಡಿಸ್ಟ್ರಿಕ್ಟ್ ಸಮ್ಮೇಳನವು ಈ ತಿಂಗಳು ತಾ || 19-20 ರಲ್ಲಿ ನಡೆಯುವುದು.

o o

ಉಚಿತ ಪಾಕಶಾಲೆ

ಬೆಂಗಳೂರು ಮಾ 13— ಮೈಸೂರು ಸರಕಾರದವರು ಚಿತ್ರದುರ್ಗ ಡಿ || ತುಮಕೂರು ಡಿ || ಮತ್ತು ಕೋಲಾರ ತಾಲ್ಲೂಕುಗಳಲ್ಲಿ ಉಚಿತ ಪಾಕಶಾಲೆಗಳ ತೆರೆಯುವುದನ್ನು ಒಪ್ಪಿರುವರು.

o o

ರಷ್ಯಾ ವಿಚಾರದಲ್ಲಿ

ರಷ್ಯಾದವರಿಗೆ ಆಟಂಬಾಂಬಿನ ರಹಸ್ಯವು ತಿಳಿದಲ್ಲಿ ಅಪಾಯಕರವೆಂದು ಚರ್ಚಿಲ್ಲರು ಹೇಳುತ್ತಿರುವರು. ಸ್ಟಾಲಿನ್ನರನ್ನು ಲಂಡನ್ನಿಗೆ ಬರಮಾಡಿಕೊಳ್ಳಕೂಡದೇ ಎಂಬ ಪ್ರಶ್ನೆಗೆ ಅಟ್ಲಿಯವರು 'ಆಗುವುದಿಲ್ಲ' ಎನ್ನುತ್ತಿದ್ದಾರಿ.

o o

ಸಿಲ್‌ಹಟ್ಟಿನ ವರ್ತಮಾನ

ಎರಡು ಹುಲಿಗಳು ಒಂದು ಹಸುವನ್ನು ತಿನ್ನಲು ಹೋದಾಡಿ ಗ್ರಾಮ ಕಂಠದಲ್ಲಿಯೇ ಒಂದು ಹುಲಿಯು ಸತ್ತಿತು. ಎರಡನೆಯದು ಹಸುವನ್ನು ತಿಗಿದುಕೊಂಡು ಹೋಗಿ ತಿಂದುಹಾಕಿತು.

o o

ಪಂ || ನೆಹರುರವರ ಅಭಿಪ್ರಾಯ

'ಇಂಡಿಯಾ ಸ್ವತಂತ್ರದೇಶವೆಂದು ಅಂಗೀಕರಿಸಲು ಬ್ರಿಟನ್ನು ನಿಶ್ಚಯವನ್ನಾಡಿಕೊಳ್ಳಬೇಕು. ತನ್ನ ರಾಜ್ಯಾಂಗವ್ಯವಸ್ಥೆಯನ್ನು ನಿರ್ಮಿಸಿಕೊಳ್ಳುವ ಪೂರ್ಣಾಧಿಕಾರದೊಂದಿಗೆ ಸಭೆಯನ್ನೇರ್ಪಡಿಸಬೇಕೆಂದು ನೇತಾಜಿ ಪ್ರತಿನಿಧಿಗೆ ಪಂ || ನೆಹರು ತಿಳಿಸಿದರು.

At Opera —

From 8-3-46

ಮೆಹತಾಬ್ — ಸುರೇಂದ

ಪಾತ್ರವಹಿಸಿರುವ

.... ವಿ ಶ್ವಾ ಸ್....

At Ranjit

From 10-3-46

Shirin Farad

— with —

RAGINI & JAYANT

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದಂಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ರಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಹಸಿ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

No. R 4 / 45--46

Office of the Rationing Officer

MYSORE CITY

ಪ್ರಕಟಣೆ Dated 11—3—46

ಆಹಾರದ ಅಭಾವ ಪ್ರಯುಕ್ತ ಇನ್ನು ಮುಂದೆ ಟೀ ಪಾರ್ಟಿಗಳು, ಸಂತೋಷಕೂಟಗಳು, ಸಮಾರಾಧನೆಗಳು ಮೊದಲಾದ ಸಮಾರಂಭಗಳಿಗೆ ಬೇಕಾಗುವ ಆಹಾರ ಪದಾರ್ಥಗಳಿಗೆ ಇನ್ನು ಮುಂದೆ ಸ್ಪೆಷಲ್ ಕೂಪನ್‌ಗಳನ್ನು ಕೊಡಲಾಗುವುದಿಲ್ಲವೆಂಬ ವಿಷಯವನ್ನು ಈ ಮೂಲಕ ತಿಳಿಯಪಡಿಸಿದೆ.

ಮದುವೆ, ಉಪನಯನ, ಮೊದಲಾದ ವಿಶೇಷ ಕಾರ್ಯಗಳಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಕನಿಷ್ಠ ಪ್ರಮಾಣದಲ್ಲಿ ಕೊಡಲು ವ್ಯವಸ್ಥೆ ಮಾಡಿದೆ.

(ಸಹಿ) ಟಿ. ವಿ. ರೆಡ್ಡಿ

ರೇಷನಿಂಗ್ ಆಫೀಸರ್, ಮೈಸೂರು ಸಿಟಿ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿ ೧ ಕ್ಕೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು